ಆಫೀಸಿಂದ ಉಗ್ರೇಶ ಅವನನ್ನು ಹುಡುಕಿಕೊಂಡು ಬಂದ. 'ಮುಂದಿನ ಬೆಸ್ತವಾರ ಬೆಂಗಳೂರಿಂದ ವಿಶೇಷ ಜನ ಬರ್ತಾರೆ, ತಹಶೀಲ್ದಾರರು ಇರ್ತಾರೆ. ಕೆರೆಗಳನ್ನೆಲ್ಲ ಬಚಾವು ಮಾಡಬೇಕು... ಉದ್ಧಾರ ಮಾಡಬೇಕು ಅಂತ ಆದೇಶ ಬಂದಿದೆ. ಅವತ್ತೆಲ್ಲೂ ಹೋಗಬ್ಯಾಡ' ಅಂತ ಹೇಳಿ ಹೋದ. ಆಶ್ಚರ್ಯಪಟ್ಟ ದೊಡ್ಡೀರ್ಯ. ಕೆರೆ ಉದ್ಧಾರ ಮಾಡೋದಕ್ಕೂ ತನಗೂ ಏನು ಸಂಬಂಧ? ತನ್ನ ಪಾತ್ರ ಏನಿದರಲ್ಲಿ? ಅಂತ ಅರ್ಥವಾಗಲಿಲ್ಲ. ತಾನು ಬೇಕಾದರೆ 'ನೋಟ' ನೋಡಿ ಕೆರೆಗೆ ದೆವ್ವದ ಪೀಡೆ ಇದೆಯೆ ನೋಡಿಕೊಡತೇನೆ ಅಂತ ಕಲ್ಪಿಸಿಕೊಂಡು ತನ್ನ ಹಾಸ್ಯಕ್ಕೆ ನಕ್ಕ. ಇದ್ದಕ್ಕಿದ್ದಂತೆ ವಿಚಾರ ಬಂದು ಎದ್ದು ತನ್ನ ಗದ್ದೆಯ ದಾರಿ ಹಿಡಿದ. ಕ್ಯಾದ್ಗೆ ಹಿಂಡಿನ ಹಿಂದೆ ನಿತ್ತು ಸಣ್ಣಪ್ಪನ ಗದ್ದೆಯನ್ನು ನೋಡಿದ. ಕೊಯ್ಲಿನ ಕೆಲಸ ಭರದಿಂದ ಸಾಗಿತ್ತು. ನೀರು ಕುಡಿಯಲು ಕೆಲಸ ನಿಲ್ಲಿಸಿದರು. ಸಣ್ಣಪ್ಪ ಹೆಂಗಸರೊಡನೆ ಮಾತಾಡುವುದು ಕಾಣಿಸಿತು. ಸುಗಣಿ ಹತ್ತಿರ ಜಾಸ್ತಿ ಮಾತಾಡಿದ ಅನಿಸಿತು. ಅವಳೇನು... ಇವನೇನು? ನಗುವಂಥ ಪ್ರಸಂಗ ಇಬ್ಬರ ನಡುವೆ ಅದೇನು? ಉಳಿದವರಿಗೆ ಸ್ವಲ್ಪ ದೂರದಲ್ಲಿ ನಿತ್ತಿದಾರ... ಅನಿಸಿ ಕಳವಳಕ್ಕೊಳಗಾದ.

ಮೂರುದಿನಕ್ಕೆ ಸಣ್ಣಪ್ಪನ ಗದ್ದೆಕೊಯ್ಲು ಮುಗಿದಿತ್ತು. ಸಣ್ಣಪ್ಪನ ದಾಯಾದಿ ಬೈರಪ್ಪನ ಗದ್ದೆ ಕೊಯ್ಯಲು ಹೋಗತೊಡಗಿದಳು ಸುಗಣಿ. ಕ್ಯಾದಗೆ ಹಿಂಡಿನ ಪಕ್ಕದಿಂದ ತನ್ನ ಗದ್ದೆಗೆ ಹೋಗುವುದನ್ನು ಮುಂದುವರಿಸಿದವನಿಗೆ ಬೈರಪ್ಪನ ಜೊತೆ ಸಣ್ಣಪ್ಪನು ಇದ್ದಿದ್ದು ನೋಡಿ ಅಚ್ಚರಿ ಜಾಸ್ತಿಯಾಗಿತ್ತು. ಬೈರಪ್ಪ ದಾಯಾದಿ; ಪಕ್ಕದ ಗದ್ದೆಯವನೆ; ಬಂದಿರಬಹುದು ಅಂತ ಸಮಾಧಾನ ಮಾಡಿಕೊಳ್ಳಲು ನೋಡಿದ. ಇದೆಲ್ಲಾ ತಾನೇ ತಂದುಕೊಳ್ಳುವ ಸಂಕಟ ಅಂತ ಮರುದಿನ ಅಲ್ಲಿ ಹೋಗುವುದನ್ನು ಬಿಟ್ಟ. ನಾಕುದಿನವಾಗಿತ್ತು. ಈಗಿತ್ತಲಾಗಿಂದ ಯಾವಾಗ ನೋಡಿದರೂ ವಿನಾಕಾರಣ ಕುಸುಗುಟ್ಟುತ್ತ ಅಸಹನೆಯಲ್ಲಿರುತ್ತಿದ್ದ ಸುಗಣಿ ಇದ್ದಕ್ಕಿದ್ದಂತೆ ಹಸನ್ಮುಖಿಯಾಗಿರತೊಡಗಿದ್ದಳು. ರಾತ್ರಿ ಇವನು ಮೈಮೇಲೆ ಕೈಹಾಕಿದರೂ ಸಿಡುಕುವುದನ್ನು ಬಿಟ್ಟಿದ್ದಳು. ಸಂತೃಪ್ತಿಯಲ್ಲಿರುವಾಗಿನ ಮೃದು ಧೋರಣೆ ನೆಲೆಸಿತ್ತು.

ಗೋಸಾಯಿ ಹೇಳಿದ್ದು ನಿಜವಾಗೋ ಕಾಲ ಬಂದಿರಬಹುದಾ?... ಅದಕ್ಕೆ ಈ ಎಲ್ಲಾ ಬದಲಾವಣೆಯಿರಬಹುದಾ ಅನಿಸಿ ನಿರಾಳತೆಯನುಭವಿಸಿದ ಮರುಕ್ಷಣ ಮನಸು ಶಂಕೆಯಿಂದ ತುಂಬಿಕೊಂಡಿತು. ಅವಳ ಸಂತೃಪ್ತಿಯೇ ಒಗಟಾಗುತ್ತ ತಳಮಳಕ್ಕೀಡಾದ. ಗೋಸಾಯಿ ಅವಳಿಗೆ ಮಗುವಾಗತದೆ ಅಂದಿದ್ನಾ ಅಥವಾ ನಿಂಗೆ ಮಗುವಾಗ್ತದೆ ಅಂತ ತನಗೆ ಹೇಳಿದ್ನಾ ಅನ್ನುವ ಸಂದೇಹ ಕಾಡಿತು. ಹಾಳಾಗಿಹೋಗಲಿ... ಒಂದು ಮಗುವಾದರೆ ಅದು ತನ್ನದಲ್ಲ ಅನ್ನುವ ಅಭಿಪ್ರಾಯ ಯಾಕೆ? ತಾನು ಹೆಬಗ ಅಂತ ತಾನೇ ನಿರ್ಧರಿಸಿಬಿಟ್ಟರೆ ಇನ್ನೇನುಳಿಯಿತು ಅಂತ ಹೇಸಿಗೆಪಟ್ಟುಕೊಂಡು ಗೆರಟೆಗೆ ಸರಾಯಿ ಎರಸಲು ಎದ್ದ. ಕುಡಿಯುವಾಗ ನೆನಪಾಯಿತು. ಜನರ ಪ್ರಶ್ನೆ ಬಗೆಹರಿಯೋದು ಹೌದು. ಆದರೆ ಇವಳಿಗೆ ಗೊತ್ತಿರುತ್ತದೆ; ಅವಳಲ್ಲೇನೂ ದೋಷವಿರಲಿಲ್ಲ; ಎಲ್ಲಾ ನಂದೇ ಅಂತ ನಮ್ಮಿಬ್ಬರಮಟ್ಟಿಗೆ ಸಿದ್ಧಮಾಡುವ ಅವಕಾಶ ಅವಳಿಗಿದೆ. ತಲೆ ಕೆಟ್ಟಂತಾಯಿತು. ಮತ್ತೊಂದು ಗೆರಟೆ ಎರಸಿಕೊಳ್ಳುವ ಒತ್ತಡ ಏರಿತು.

ಬೆಸ್ತವಾರ ಅನ್ನೋದು ಮರೆತೇಹೋಗಿತ್ತು. ಪಂಚಾಯ್ತಿ ಆಫೀಸಿನ ಉಗ್ರೇಶ ಬಂದು 'ಅವತ್ತೇ ಹೇಳಿದ್ನಲ್ಲ, ನಿಮ್ಮನ್ನ ಕರಿಯದೊಂದೇ ನನಗ ಕೆಲಸೇನು?' ಅಂತ ಸಿಟ್ಟುಮಾಡಿಕೊಂಡಾಗ, ನೆನಪಾಗಿ 'ವಳ್ಳೇ ಕತಿ ಇವರದ್ದು...' ಅಂತ ಗೊಣಗುತ್ತಾ ರುಮಾಲು ಸುತ್ತಿಕೊಂಡು ಎದ್ದು ಹೊರಟ. ಗೌಡರಮನೆ ಹೊರಕಟ್ಟೆಯಲ್ಲಿ ಸುಮಾರು ಜನರಿದ್ದರು. ಇಬ್ಬರು ಮೂವರಿಗೆ ಕುರ್ಚಿ ಕೊಟ್ಟು ಕುಳ್ಳಿರಿಸಿದ್ದರು. ಒಬ್ಬ ಎಲ್ಲರನ್ನುದ್ದೇಶಿಸಿ ಮಾತಾಡತೊಡಗಿದ. ಕೆರೆ ಕುಂಟೆಗಳು ಒಂದುಕಾಲದಲ್ಲಿ ಆಯಾ ಊರಿನ ಜೀವನಾಡಿಗಳಾಗಿದ್ದವು. ಜನ ದುರಾಸೆಗೆ ಬಿದ್ದು ಅವನ್ನೆಲ್ಲ ಮನೆ ಜಮೀನು ಅಂತ